**ಕರ್ನಾಟಕ ಸರ್ಕಾರ**

ಸಂಖ್ಯೆ: ಆಸಾನಿ/ಖಕೈಶ/13/ಬಿಆರ್/2011-12

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು-560 001.

ದಿನಾಂಕ: 21-02-2012

ಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ನಿರ್ವಹಣಾಧಿಕಾರಿಗಳಿಗೆ,

ಮಾನ್ಯರೆ,

ವಿಷಯ: ವ್ಯವಹಾರ ದಾಖಲೆ ವಹಿ-ಉದ್ದಿಮೆಗಳ ನೋಂದಣಿ/ಪರವಾನಿಗೆ ಮಾಹಿತಿ ಗಣಕೀಕರಣ ಕುರಿತು.

* * * * * *

13ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ವ್ಯವಹಾರ ದಾಖಲೆ ವಹಿಯನ್ನು ರಾಜ್ಯದಲ್ಲಿ ತಯಾರಿಸಬೇಕಾಗಿದೆ. ವ್ಯವಹಾರ ದಾಖಲೆ ವಹಿಯಲ್ಲಿ ವಿವಿಧ ಇಲಾಖೆಗಳಲ್ಲಿ ವಿವಿಧ ಕಾಯಿದೆ ಅಡಿಯಲ್ಲಿ ನೋಂದಣಿಯಾದ/ಪರವಾನಿಗೆ ನೀಡಿದ ಎಲ್ಲಾ ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿಯ ತಯಾರಿಕೆ, ಮಾರಾಟ/ವಿತರಣೆ ಹಾಗೂ ಸೇವೆಗಳಲ್ಲಿ ನಿರತವಾಗಿರುವ ಕೈಗಾರಿಕೆ/ಉದ್ಯಮಗಳನ್ನು ಪಟ್ಟಿ ಮಾಡಬೇಕಾದ ಅಗತ್ಯವಿದೆ.

ಈ **"Common Business Register"**(ವ್ಯವಹಾರ ದಾಖಲೆ ವಹಿ) ತಯಾರಿಕಾ ಕಾರ್ಯಕ್ರಮದಂತೆ ಸ್ಥಳೀಯ ಸಂಸ್ಥೆಗಳಲ್ಲಿ ನೋಂದಣಿಯಾದ/ಪರವಾನಿಗೆ ನೀಡಿದ ಉದ್ದಿಮೆಗಳ ಪಟ್ಟಿ ರಾಜ್ಯದ ಪ್ರತಿಯೊಂದು ನಗರಕ್ಕೂ ಹಾಗು ಗ್ರಾಮಕ್ಕೂ ಸಹ ಸಿದ್ದಗೊಳಿಸಬೇಕಾಗಿದೆ. ಈ ಮಾಹಿತಿಯಿಂದ ವಿವಿಧ ಕಾಯಿದೆ ಅಡಿಯಲ್ಲಿ ನೋಂದಣಿಯಾಗದೇ ಬಿಟ್ಟು ಹೋಗಿರುವ ಉದ್ದಿಮೆಗಳ ವಿವರ ಲಭ್ಯವಾಗುವುದರೊಂದಿಗೆ ಅವುಗಳನ್ನು ನೋಂದಣಿ ಮಾಡಲು ಸಕ್ಷಮ ಪ್ರಾಧಿಕಾರಗಳಿಗೆ ಉಪಯೋಗವಾಗುವುದಲ್ಲದೆ ಇದರಿಂದಾಗಿ ಸರ್ಕಾರಕ್ಕೆ ಆದಾಯ(ನೋಂದಣಿ ಶುಲ್ಕ) ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಅಲ್ಲದೆ ಅಸಂಘಟಿತ ವಲಯಗಳ ಅಭಿವೃದ್ಧಿಗೆ/ಸವಲತ್ತುಗಳನ್ನು ಒದಗಿಸುವ ಯೋಜನೆಗಳನ್ನು ರೂಪಿಸಲು ಕೈಗೊಳ್ಳುವ ವಿವಿಧ ಸಮೀಕ್ಷೆಗಳಿಗೆ ಈ ಮಾಹಿತಿ ಬಹಳ ಉಪಯೋಗವಾಗುತ್ತದೆ. ಇದಲ್ಲದೆ ಜಿಲ್ಲಾ ಪಂಚಾಯಿತಿಯಿಂದ ತಯಾರಿಸಲಾಗುತ್ತಿರುವ ಜಿಲ್ಲಾದಾಯ ಅಂದಾಜಿನಲ್ಲಿ ಅಸಂಘಟಿತ ವಲಯದ ಪಾಲು ಹಾಗೂ ಕಾರ್ಮಿಕರ ಸಂಖ್ಯೆಯ ಮಾಹಿತಿ ಲಭ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ನಗರ ಸ್ಥಳೀಯ ಸಂಸ್ಥೆಗಳಿಂದ ಹಾಗು ಪಂಚಾಯತ್ ರಾಜ್ ಸಂಸ್ಥೆಗಳಿಂದ ಮಾಹಿತಿ ಸಂಗ್ರಹಣೆಗಾಗಿ ಒಂದು ನಮೂನೆಯನ್ನು ಎಕ್ಸೆಲ್(Excel) ಫಾರ್ಮ್ಯಾಟ್‌ನಲ್ಲಿ ತಯಾರಿಸಿದ್ದು ನಮೂನೆಯಲ್ಲಿ ಪ್ರತಿ ನಗರ ಸ್ಥಳೀಯ ಸಂಸ್ಥೆಗಳು ಹಾಗು ಪಂಚಾಯತ್ ರಾಜ್ ಸಂಸ್ಥೆಗಳು ಉದ್ದಿಮೆಗಳಿಗೆ ನೀಡಿರುವ ಪರವಾನಗಿ ಮಾಹಿತಿಯನ್ನು ಭರ್ತಿ ಮಾಡಬೇಕಾಗಿದ್ದು ನಮೂನೆಯನ್ನು ಮತ್ತು ಭರ್ತಿ ಮಾಡಲು ಬೇಕಾದ ಸೂಚನೆಗಳನ್ನು(ನಮೂನೆ ಮಾದರಿಯಲ್ಲೇ) ನಿರ್ದೇಶನಾಲಯದ ವೆಬ್‌ಸೈಟ್(website)ನಲ್ಲಿ ಅಪ್‌ಲೋಡ್ ಮಾಡಲಾಗಿರುತ್ತದೆ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ವೆಬ್‌ಸೈಟ್ ವಿಳಾಸ: www.des.kar.nic.in ಆಗಿರುತ್ತದೆ.

ಪ್ರತಿ ನಗರ ಸ್ಥಳೀಯ ಸಂಸ್ಥೆಗಳು ಹಾಗು ಪಂಚಾಯತ್ ರಾಜ್ ಸಂಸ್ಥೆಗಳು ಮೇಲಿನ ವೆಬ್‌ಸೈಟ್ ವಿಳಾಸದಿಂದ ನಮೂನೆಯನ್ನು ಮತ್ತು ಭರ್ತಿ ಮಾಡಲು ಬೇಕಾದ ಸೂಚನೆಗಳನ್ನು(ನಮೂನೆ ಮಾದರಿಯಲ್ಲೇ) ಡೌನ್‌ಲೋಡ್ (down load) ಮಾಡಿಕೊಂಡು ಅವರ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉದ್ದಿಮೆಗಳನ್ನು ನಿಗದಿತ ನಮೂನೆಯಲ್ಲಿ ಕಂಪ್ಯೂಟರ್‌ನಲ್ಲೇ ಡಾಟಾ ಎಂಟ್ರಿ ಮಾಡಿ soft form ನಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿಗೆ ಇ-ಮೇಲ್ ಮೂಲಕ ಕಳುಹಿಸಬೇಕಾಗಿರುತ್ತದೆ. ಈ ಮಾಹಿತಿಯನ್ನು ಭರ್ತಿ ಮಾಡುವ ವಿಧಾನವನ್ನು ದಿನಾಂಕ: 22-02-2012 ರಂದು ಈ ಕಛೇರಿಯಲ್ಲಿ ಸಮಾಲೋಚಕರಿಗೆ ನಡೆಯಲಿರುವ ಆರ್ಥಿಕ ಮತ್ತು ಉದ್ದೇಶಿತ ವರ್ಗೀಕರಣದ ತರಬೇತಿ ಕಾರ್ಯಕ್ರಮದಲ್ಲಿ ತಿಳಿಸಿ ಕೊಡಲಾಗುವುದು. ಈ ಮಾಹಿತಿಯನ್ನು ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಂದ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಂದ ಸಂಗ್ರಹಿಸಿ **ದಿನಾಂಕ: 31.03.2012** ರೊಳಗೆ soft form ನಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಕ್ಕೆ ಕಳುಹಿಸಲು ಕೋರಿದೆ.

13ನೇ ಹಣಕಾಸು ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲಾದ ಕಾರ್ಯಕ್ರಮದ ಪ್ರಗತಿಯ ಪರಿಶೀಲನೆಗಾಗಿ ಸರ್ಕಾರದ ಆದೇಶದ ಸಂಖ್ಯೆ: ಪಿಡಿ 151 ಎಸ್‌ಎಂಸಿ 2011 ದಿನಾಂಕ 19–11–2011ರಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯ ಸಹ ಅಧ್ಯಕ್ಷರು ಜಿಲ್ಲಾ ಪಂಚಾಯತ್‌ನ ಮುಖ್ಯ ನಿರ್ವಹಣಾಧಿಕಾರಿಗಳು ಹಾಗು ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿಗಳು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಇಬ್ಬರು ಸಮಾಲೋಚಕರನ್ನು ಕರ್ನಾಟಕ ಕಾರ್ಯ ತಾಂತ್ರಿಕ ಸಾಂಖ್ಯಿಕ ಯೋಜನೆಯಡಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೀಡಲಾಗಿರುತ್ತದೆ. ವ್ಯವಹಾರ ದಾಖಲೆ ವಹಿ ತಯಾರಿಕೆಗೆ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಂದ ಮಾಹಿತಿ ಸಂಗ್ರಹಿಸಲು ಈ ಸಮಾಲೋಚಕರ ಸೇವೆಯನ್ನು ಉಪಯೋಗಿಸಲು ಹಾಗೂ ಈ ಕಾರ್ಯಕ್ಕೆ ಮುಖ್ಯ ಯೋಜನಾಧಿಕಾರಿಯವರನ್ನು ಮೇಲುಸ್ತುವಾರಿ ಅಧಿಕಾರಿಯನ್ನಾಗಿ ನೇಮಿಸಲು ಕೋರಿದೆ.

ತಮ್ಮ ವಿಶ್ವಾಸಿ,

ಸಹಿ/–

(ಹೆಚ್. ಇ. ರಾಜಶೇಖರಪ್ಪ)
ನಿರ್ದೇಶಕರು

ಪ್ರತಿಯನ್ನು ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿಗಳಿಗೆ ಕಳುಹಿಸುತ್ತಾ ಜಿಲ್ಲೆಯಲ್ಲಿ ವ್ಯವಹಾರ ದಾಖಲೆ ವಹಿ ಕಾರ್ಯದ ಬಗ್ಗೆ ಮೇಲುಸ್ತುವಾರಿಯನ್ನು ವಹಿಸುವಂತೆ ಕೋರಿದೆ